ಬೆಂಬಿಡದೆ ಕಾಡುತ್ತಲಿವೆ. ಒಂದು ರಣಹದ್ದಿಗೆ ಇವನೇ ಹಸರಿಟ್ಟಿದ್ದ, ಅದರ ಹೆಸರು ಅಲೆಗ್ಸಾಂಡರ್. ಇದಕ್ಕೆ ಯಾಕೆ ಈ ಹಸರಿಟ್ಟಿದ್ದನೆಂದರೇ, ಈ ರಣಾಂಗದಲ್ಲಿ ಅದು ಬಂದಾಗ ಯಾರಾದರೂ ಅಡ್ಡ ಬಂದರೆ, ತುಳಿದು ಹಾಕಿ ಕೊಕ್ಕಿನಿಂದ ಕುಕ್ಕಿ ತನ್ನ ಅಧಿಪತ್ಯವನ್ನು ಅದು ಸಾರುತ್ತಿತ್ತು. ಮತ್ತೆ ಅವನಿಗೆ ಒಂದು ಕರಾಳ ಘಟನೆ ನೆನಪಾಯಿತು. ಸತ್ತ ತನ್ನ ತಮ್ಮಂದಿರಾದ ಮಲ್ಲಪ್ಪ, ಗುರುಸಂಗ ಹಾಗೂ ನಿರುಪಾದಿ ಮತ್ತು ಪ್ರೇಯಸಿಯಾದ ಮರ್ಲಿನ್‌ಳನ್ನು ಈ ಅಲೆಗ್ಸಾಂಡರ್ ನೇತ್ರತ್ವದ ರಣಹದ್ದುಗಳ ಪಡೆ ಹೀಗೆಯೇ ಹರಿಹರಿದು ತಿನ್ನುವಾಗ ಇವನು ಕೈಮುಗಿದು ಬೇಡಿಕೊಂಡಿದ್ದ. 'ಬೇಡ್ರೋ. . . ಬೇಡ್ರೋ . . . ದಯವಿಟ್ಟು ಬೇಡ್ರೋ' ಎನ್ನುವಾಗಲೇ ಯಾರೂ ಮಾತು ಕೇಳದ ಆದರೆ ಇವನ ಮಾತನ್ನು ಕೊಂಚ ಗೌರವಿಸುತ್ತಿದ್ದ ಅಲೆಗ್ಸಾಂಡರ್ ಇವನ ಮೇಲೆಯೇ ದಾಳಿ ಮಾಡಲು ಬಂದಿತ್ತು. ಈ ರಣಹದ್ದಿಗೆ ಎಲ್ಲರೂ ಒಂದೇ. ತನ್ನ ತಮ್ಮಂದಿರಿಗೆ ಹಾಗೂ ಪ್ರೇಯಸಿಗೆ ಏಕೆ ವಿನಾಯಿತಿ ಕೊಡಬೇಕು ಎನ್ನುವ ತತ್ವ ಅದರದಾಗಿತ್ತು. ಇಲ್ಲಿ ಸಾವೆಂದರೆ ಏನು? ಅರೆಬರೆ ಗಾಯಗೊಂಡವನೂ ಸಹ ಸತ್ತ ಹೆಣವೇ. ಸ್ಟ್ರೆಚರ್‌ನಲ್ಲಿ ಗಾಯಗೊಂಡವರನ್ನು ಹಾಕಿಕೊಂಡು ಹೋಗಿ ಅವನಿಗೆ ಉಪಚರಿಸುತ್ತಾರೆಂದು ಅಲ್ಲ. ಇಲ್ಲಿರುವುದೊಂದು ಭಯಾನಕ ವೈದ್ಯಲೋಕ. ಅರೆಜೀವಂತ ಈ ವ್ಯಕ್ತಿಗಳನ್ನು ಕತ್ತರಿಸಿ ಮೂತ್ರಪಿಂಡ, ಲಿವರ್, ಹೃದಯ, ಮಹಾಮಸ್ತಿಷ್ಕಾ, ಅನುಮಸ್ತಿಷ್ಕ ಎಂದು ಇನ್ನೂ ಉಸಿರಾಡುವ ದೇಹವನ್ನು ಮುಂದಿಟ್ಟುಕೊಂಡು ಅಧ್ಯಯನ ಮಾಡುತ್ತಿದ್ದರು. ತಟಸ್ಥವಾಗಿದ್ದ ಆ ದೇಶ ವೈದ್ಯಗಾರಿಕೆಯ ಮುಂದಿನ ಸಂಶೋಧನೆಯ ಸಲುವಾಗಿ ಒಂದು ಫರ್ಮಾನು ಹೊರಡಿಸಿ, ಅದಕ್ಕಾಗಿಯೇ ಅದು ಕೊನೆಯ ಎರಡು ವರ್ಷದ ಅಂತ್ಯದಲ್ಲಿ ಯುದ್ಧದಲ್ಲಿ ಭಾಗವಹಿಸಿತ್ತು. ಹಾಗು ತಾನು ಏಕೆ ಭಾಗವಹಸಿದೆ ಎನ್ನುವುದಕ್ಕೆ ಒಂದು ಸ್ಪಷ್ಟೀಕರಣದ ಹೇಳಿಕೆ ಹೊರಡಿಸಿತ್ತು. ಇದೊಂದು 'ಸದುದ್ದೇಶದ ಯುದ್ಧ. ನಾಯಿ, ನರಿ, ಇಲಿಗಳ ಮೇಲೆ ವೈದ್ಯಕೀಯ ಜ್ಞಾನ ಪ್ರಯೋಗ ಮಾಡುವುದಕ್ಕಿಂತಲೂ ಜೀವಂತ ಹೆಣಗಳು ಸಿಗುವ ಈ ಯುದ್ಧ ಭೂಮಿಯೇ ಸಾಕು ನಾವು ಬಯಸಿದ್ದನ್ನು ಪಡೆಯಲು, ಇನ್ನೊಂದು ವಿಷಯ ನಿಮಗೆ ಪ್ರಮಾಣಮಾಡಿ ಹೇಳುತ್ತೇವೆ ಇನ್ನೂ ಹತ್ತು ವರ್ಷಗಳಲ್ಲಿ ಜೀವ ನಿರೋಧಕ ಔಷಧಗಳ ಸಾಮ್ರಾಜ್ಯ ತಮ್ಮದೇ' ಎಂದು ಘೋಷಿಸಿತ್ತು ಈ ದೇಶ. ಅಂದು ಇವನಿಗೆ ಇದೆಲ್ಲವೂ ನೆನೆದು ಕಣ್ಣುಗಳು ಮಂಜಾಗಿದ್ದವು. ನಿದ್ರೆಗೆ ಜಾರೋಣವೆಂದರೂ ಭಯಾನಕ ಮೇಘಸ್ಫೋಟದಂಥ ನೆನಪುಗಳು. ಒಂದು ಕರುಳ ಬಾಂಧವ್ಯ ಕಡಿದ ನೆನಪು, ಇನ್ನೊಂದು ಪ್ರೇಮ ಕಾಮದ ನೆನಪು. ಅಯ್ಯೋ ಶಿವನೇ!. ಯುದ್ಧಗಳು ಸಾಮ್ರಾಜ್ಯ ವಿಸ್ತರಣೆಯ ಭಾಗವಾಗಿ ಮಾತ್ರ ನಡೆಯುತ್ತಿಲ್ಲ. ಅದಕ್ಕೆ ನಾನಾ ನಮೂನೆಯ ಮುಖಗಳಿವೆ. ಇದನ್ನು ಅರ್ಥೈಸಿಕೊಳ್ಳಲು ನಮಗೆ ಕಾಲಾವಕಾಶ ಬೇಕಾಗಬಹುದು ಎಂದು ಹೇಳಿದವನು ಮಹಾದಂಡನಾಯಕನಾಗಿದ್ದ ಕ್ಯಾಪ್ಟನ್ ಥಾಮಸ್. ಅವನು ಮಹಾ ಸುಳ್ಳುಗಾರ. ಆದರೆ ಅವನು ಹೇಳಿದ ಈ ಸುಳ್ಳು ಮಾತುಗಳಲ್ಲಿಯೂ ಏನೋ ಸತ್ಯ ಅಡಗಿದೆ ಎಂದು ಇವನಿಗೆ ಅನಿಸುತ್ತಿತ್ತು. ಅವನಿಗೆ ಅವನ ಪ್ರೇಯಸಿ ಮರ್ಲಿನ್ ನೆನಪಾಗಹತ್ತಿದಳು. ನಿರ್ದಯಿ ವೈದ್ಯರು, ಕೈಗೆ ಗುಂಡು ತಗುಲಿದ್ದ ಮತ್ತೆ ವಾಸಿಯಾಗಬಹುದಾಗಿದ್ದ ಮರ್ಲಿನ್ ಎಂಬ ಅವನ ಪ್ರೇಯಸಿಯನ್ನು ಹೊತ್ತೊಯ್ದು, ಇಡೀ ವ್ಯಂತಕೋಶವನ್ನೇ ಅಡ್ಡಾದಿಡ್ಡಿಯಾಗಿ ಕಾಯಿಪಲ್ಯೆ ಕೊಯ್ದಂತೆ ಕೊಯ್ದು ಹಾಕಿದ್ದರು. ಇವನಿಗೆ ಅದಮ್ಯ ಪ್ರೀತಿಪ್ರೇಮಕಾಮ ಕೊಟ್ಟ ಅವಳ ನೋವಿನ ಆರ್ತನಾದಗಳು ಹಾಗೂ ಅವಳ ವಿಕ್ಷಿಪ್ತ ರೂಪ ಆ ರಣಾಂಗಣದಲ್ಲಿ ಪ್ರತಿಧ್ವನಿಸುತ್ತಲೇ ಬೇರೆಯದೇ ರೀತಿಯಲ್ಲಿ ಕಾಣಿಸುತ್ತಿದ್ದವು.

ಅವಳು ಎಂಥವಳೆಂದರೇ ನಿಜವಾಗಿಯೂ ಯುದ್ಧಭೂಮಿಯ ಭಾಷೆಯನ್ನೇ ಬದಲಾಯಿಸಿದವಳು. ಉಗ್ರರೂಪದ ಭಯಾನಕ ಯುದ್ಧದ ಮೇಲ್ಮೈಗೆ ಸಂಯಮದ ಸಂಜೆಯ ಬಣ್ಣ ಬಳಿದವಳು. ಅಂಥವಳು ಅರೆಜೀವ ಹೊತ್ತು ಬದುಕಲಾಗದ ಸ್ಥಿತಿಯಲ್ಲಿ ಬಸವಳಿದು ಬಿದ್ದಾಗ ಅವಳ ಸ್ಥಿತಿ ನೋಡಲಾಗದೆ ಇವನೇ ಗುಂಡಿಟ್ಟು ಕೊಂದಿದ್ದ. ತಮ್ಮಂದಿರ ವಿಷಯದಲ್ಲಿಯೂ ಅವರು ಇವನಿಗೆ ಉಪಕಾರ ಮಾಡಲು ಬಂದಿದ್ದರು. ಅದೆಂತಹ ಉಪಕಾರ? ತಮ್ಮಂದಿರನ್ನು ತಲೆ ಹೊಡೆದು, ಕಿಡ್ನಿ ಕಿತ್ತು, ಮೆದಳು ಹೃದಯ ಗಾಸಿಮಾಡಿದರೂ ಕೊನೆಗೆ ಇವನ ತಮ್ಮಂದಿರೆಂಬ ಕಕ್ಕುಲಾತಿಗೆ ಇವನಿಗೆ